**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಸದಸ್ಯರ ಹೆಸರು | ಶ್ರೀ ಸಿ.ಟಿ.ರವಿ (ವಿಧಾನ ಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 716 (809) |
| ಉತ್ತರಿಸಬೇಕಾದ ದಿನಾಂಕ | 10.03.2026 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಚಿಕ್ಕಮಗಳೂರು ನಗರಕ್ಕೆ ಒಳಚರಂಡಿ ನಿರ್ಮಿಸುವ ಕಾಮಗಾರಿ ಮಂಜೂರಾಗಿದ್ದು ಯಾವಾಗ; ಕಾಮಗಾರಿ ಪೂರ್ಣಗೊಂಡಿದೆಯೇ; ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ: | ಚಿಕ್ಕಮಗಳೂರು ನಗರದಲ್ಲಿ ಮಂಡಳಿವತಿಯಿಂದ ಒಟ್ಟು 3 ಹಂತಗಳಲ್ಲಿ ಒಳಚರಂಡಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.<br><br>**1 ನೇ ಹಂತ:**<br>ಚಿಕ್ಕಮಗಳೂರು ನಗರದ 1ನೇ ಹಂತದ ಒಳಚರಂಡಿ ಯೋಜನೆಯನ್ನು 2001ರ ಅಂತ್ಯಕ್ಕೆ ನಿರೀಕ್ಷಿಸಿದ ಜನಸಂಖ್ಯೆ 71000 ಗಳಂತೆ ವಿನ್ಯಾಸಿಸಿ ಸುಮಾರು 70 ಕಿಮೀ ಸೀವರ್ ಕೊಳವೆ ಜಾಲವನ್ನು 6.54 ಎಂ.ಎಲ್.ಡಿ ಸಾಮರ್ಥ್ಯದ ಬಳಸಿದ ನೀರಿನ ಸಂಸ್ಕರಣ ಘಟಕದೊಂದಿಗೆ 1984 ಇಸವಿಯಲ್ಲಿ ಚಾಲನೆಗೊಳಿಸಲಾಗಿದ್ದು, ಸದರಿ ಯೋಜನೆಯ ನಿರ್ವಹಣೆಯನ್ನು ನಗರಸಭೆ ವತಿಯಿಂದ ಕೈಗೊಳ್ಳಲಾಗುತ್ತಿದೆ.<br><br>**2 ನೇ ಹಂತ:**<br>ಚಿಕ್ಕಮಗಳೂರು ನಗರಕ್ಕೆ 1ನೇ ಹಂತದ ಒಳಚರಂಡಿ ವ್ಯವಸ್ಥೆ ಇರುವ ಪ್ರದೇಶ ಹೊರತುಪಡಿಸಿ ಬಾಕಿ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ 2ನೇ ಹಂತದ ರೂ.57.00 ಕೋಟಿಗಳ ಯೋಜನೆಗೆ ಸರ್ಕಾರದ ವತಿಯಿಂದ ಆದೇಶ ಸಂಖ್ಯೆ:ಯು.ಡಿ.ಡಿ/04/ ಯು.ಡಿ.ಎಸ್/ 2010-2011, ದಿನಾಂಕ:01.12.2010 ರಲ್ಲಿ ಹಾಗೂ ಪರಿಷ್ಕೃತ ಅಂದಾಜು ಮೊತ್ತ ರೂ.82.00 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ನಆಇ/22/ಯುಡಿಎಸ್/2017. ದಿ:12.03.2018ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>2ನೇ ಹಂತದ ಯೋಜನೆಯಡಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ.<br>➢ ಸೀವರ್ ಕೊಳವೆ ಜಾಲ ಅಳವಡಿಕೆ – 232.00 ಕಿಲೋ ಮೀಟರ್.<br>➢ ಮಷಿನ್ ಹೋಲ್ ನಿರ್ಮಾಣ – 7382 ಸಂಖ್ಯೆ<br>➢ ವೆಟ್ ವೆಲ್ ನಿರ್ಮಾಣ – 3 ಸಂಖ್ಯೆ.<br>➢ ವೆಟ್ ವೆಲ್ ಪಂಪಿಂಗ್ ಮೆಷಿನರಿಗಳು ಅಳವಡಿಕೆ – |

10 ಸಂಖ್ಯೆ.

- 20 ಎಂ.ಎಲ್.ಡಿ ಸಾಮರ್ಥ್ಯದ ಬಳಸಿದ ನೀರಿನ ಸಂಸ್ಕರಣ ಘಟಕ – 1 ಸಂಖ್ಯೆ.

ಪ್ರಸ್ತುತ 2ನೇ ಹಂತದ ಯೋಜನೆಯ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ನಗರದಲ್ಲಿ ಉತ್ಪತ್ತಿಯಾಗುತ್ತಿರುವ ಸುಮಾರು 18 ರಿಂದ 19 ಎಂ.ಎಲ್.ಡಿ ಬಳಸಿದ ನೀರನ್ನು ಯೋಜನೆಯಲ್ಲಿ ನಿರ್ಮಿಸಲಾಗಿರುವ 20 ಎಂ.ಎಲ್.ಡಿ ಸಾಮರ್ಥ್ಯದ ಎಸ್.ಟಿ.ಪಿ ಯಲ್ಲಿ ಸಂಸ್ಕರಿಸಿ, ಘಟಕದ ಪಕ್ಕದಲ್ಲಿರುವ ಜಮೀನುಗಳಿಗೆ ಕೃಷಿ ಚಟುವಟಿಕೆಗೆ ಹರಿಬಿಡಲಾಗುತ್ತಿದೆ.

**3 ನೇ ಹಂತ:**

ಮುಂದುವರೆದು, 2ನೇ ಹಂತದ ಒಳಚರಂಡಿ ಯೋಜನೆಯಡಿ ಪ್ರತಿ ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಅನುವು ಇಲ್ಲದಿದ್ದ ಕಾರಣ ನಗರದ ಸುಮಾರು 17450 ಸಂಖ್ಯೆ ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕ ಕಲ್ಪಿಸುವ 3ನೇ ಹಂತದ ರೂ.26.31 ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/05/ಯು.ಡಿ.ಎಸ್/ 2021, ದಿನಾಂಕ:03.06.2021 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯಡಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

| ಕ್ರ. ಸಂ | ಕಾಮಗಾರಿ | ಪ್ರಗತಿ | ಬಾಕಿ |
|---|---|---|---|
| 1 | ಒಳಚರಂಡಿ ಗೃಹ ಸಂಪರ್ಕ | 11500 ಸಂಖ್ಯೆ | 500 ಸಂಖ್ಯೆ |
| 2 | ಸೀವರ್ ಕೊಳವೆ ಜಾಲ | 17.50 ಕಿ.ಮೀ | 1.0 ಕಿ. ಮೀ |
| 3 | ಸೀವೆಜ್ ಸಕ್ಕಿಂಗ್ ಕಂ ಜೆಟ್ಟಿಂಗ್ ಮಷಿನ್ ಸರಬರಾಜು | 1 ಸಂಖ್ಯೆ | - |

ಸದರಿ ಯೋಜನೆಯ ಕಾಮಗಾರಿಗಳು ಶೇ.98ರಷ್ಟು ಪೂರ್ಣಗೊಂಡಿದ್ದು ಬಾಕಿ ಕಾಮಗಾರಿಗಳನ್ನು ಮಾರ್ಚ್-2026 ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು.

(ಆ) ಈ ಕಾಮಗಾರಿಗೆ ಮಂಜೂರಾಗಿರುವ ಮತ್ತು ಬಿಡುಗಡೆಯಾಗಿರುವ ಅನುದಾನ ಎಷ್ಟು; ಮಂಜೂರಾಗಿರುವ ಅನುದಾನದಲ್ಲಿ ಈವರೆಗೆ ಎಷ್ಟು ವೆಚ್ಚವಾಗಿದೆ;

ಈ ಕಾಮಗಾರಿಗೆ ಮಂಜೂರಾಗಿರುವ, ಬಿಡುಗಡೆಯಾಗಿರುವ ಹಾಗೂ ವೆಚ್ಚದ ಮಾಹಿತಿ ಅನುಮೋದನೆಯಾಗಿರುವ ಆರ್ಥಿಕ ಮಾದರಿ ಕೆಳಕಂಡಂತಿದೆ.

**2ನೇ ಹಂತದ ಒಳಚರಂಡಿ ಯೋಜನೆ - ರೂ. 82.00 ಕೋಟಿಗಳು.**

**ರೂ. ಕೋಟಿಗಳಲ್ಲಿ**

| ಕ್ರ. ಸಂ | ಪಾಲು | ಮಂಜೂರು ಮೊತ್ತ | ಬಿಡುಗಡೆ ಮೊತ್ತ | ಬಾಕಿ ಮೊತ್ತ |
|---|---|---|---|---|
| 1 | ರಾಜ್ಯ ಸರ್ಕಾರ- ಶೇ. 25 | 20.50 | 20.50 | - |

| | | | | |
|---|---|---|---|---|
| 2 | ಆರ್ಥಿಕ ಸಂಸ್ಥೆ ಸಾಲ- ಶೇ. 50 | 41.00 | 41.00 | - |
| 3 | ಸ್ಥಳೀಯ ಸಂಸ್ಥೆ ಪಾಲು– ಶೇ 25 | 20.50 | 14.25 | 6.25 |
| | **ಒಟ್ಟು** | **82.00** | **75.75** | **6.25** |

➢ ಈವರೆಗಿನ ವೆಚ್ಚ - **ರೂ. 77.68 ಕೋಟಿಗಳು**

**3ನೇ ಹಂತದ ಒಳಚರಂಡಿ ಯೋಜನೆ: ರೂ.26.31 ಕೋಟಿಗಳು**

**ರೂ. ಕೋಟಿಗಳಲ್ಲಿ**

| **ಕ್ರ. ಸಂ** | **ಪಾಲು** | **ಮಂಜೂರು ಮೊತ್ತ** | **ಬಿಡುಗಡೆ ಮೊತ್ತ** | **ಬಾಕಿ ಮೊತ್ತ** |
|---|---|---|---|---|
| 1 | ರಾಜ್ಯ ಸರ್ಕಾರ- ಶೇ. 70 | 18.42 | 18.16 | 0.26 |
| 2 | ಆರ್ಥಿಕ ಸಂಸ್ಥೆ ಸಾಲ - ಶೇ. 20 | 5.26 | - | 5.26 |
| 3 | ಸ್ಥಳೀಯ ಸಂಸ್ಥೆ ಪಾಲು– ಶೇ 10 | 2.63 | 0.00 | 2.63 |
| | **ಒಟ್ಟು** | **26.31** | **18.16** | **8.15** |

➢ ಈವರೆಗಿನ ವೆಚ್ಚ - **ರೂ. 18.16 ಕೋಟಿಗಳು**.

ಮೇಲಿನಂತೆ ಸದರಿ ಯೋಜನೆಗೆ ಸ್ಥಳೀಯ ಸಂಸ್ಥೆಯಿಂದ ಒಟ್ಟು ರೂ.8.88 ಕೋಟಿಗಳ ಅನುದಾನ ಬಿಡುಗಡೆ ಬಾಕಿ ಇರುತ್ತದೆ.

| | | |
|---|---|---|
| (ಇ) | ಬಾಕಿ ಇರುವ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸ ಲಾಗುವುದು ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ ಇದರ ನಿರ್ವಹಣೆಯನ್ನು ಯಾರು ಮಾಡುತ್ತಾರೆ? | 2ನೇ ಹಂತದ ಒಳಚರಂಡಿ ಯೋಜನೆಯ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, 3ನೇ ಹಂತದ ಒಳಚರಂಡಿ ಯೋಜನೆಯ ಕಾಮಗಾರಿಗಳು ಶೇ.98 ರಷ್ಟು ಪೂರ್ಣಗೊಂಡಿದ್ದು ಬಾಕಿ ಕಾಮಗಾರಿಗಳನ್ನು ಮಾರ್ಚ್-2026 ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು.<br><br>3ನೇ ಹಂತದ ಯೋಜನೆಯ ಕಾಮಗಾರಿಗಳು ಪೂರ್ಣಗೊಂಡ ನಂತರ 2ನೇ ಹಂತ ಹಾಗೂ 3ನೇ ಹಂತದ ಯೋಜನೆಯ ಕಾಮಗಾರಿಗಳು / ಘಟಕಗಳನ್ನು ಮುಂದಿನ ನಿರ್ವಹಣೆಗಾಗಿ ನಗರಸಭೆ, ಚಿಕ್ಕಮಗಳೂರುರವರಿಗೆ ಹಸ್ತಾಂತರಿಸಲಾಗುವುದು. |

ಸಂಖ್ಯೆ :ನಅಇ 26 ಯುಎಂಎಸ್ 2026

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು.